ಪ್ರೊಫೆಸರ್ ಆಗಿದ್ದೀರಿ. ಇಲ್ಲಿ ನಾನು ಬರೆದಿರೋದು ಒಪ್ಪಿಗೆ ಆಗದೆ ಇದ್ರೆ ಇದನ್ನು ಹರಿದು ಹಾಕಿಬಿಡಿ' ಅಂತ. ಶ್ರೀರಾಮ್ ಇದನ್ನ ನನಗೆ ಓದೋಕೆ ಕೊಟ್ಟರು. ನಾನು ಓದಿ 'ನಾವೇನು ತೇಜಸ್ವಿಗಿಂತ ದೊಡ್ಡವರಲ್ಲ, ಸುಮ್ನೆ ಪತ್ರಿಕೆಗೆ ಕಳಿಸಿ' ಅಂದೆ. ಅದು 'ಲಂಕೇಶ್ ಪತ್ರಿಕೆ'ಯಲ್ಲಿ ಬಂತು. ಅಂಥಾ ಸ್ನೇಹ ಅದು.

ಒಂದು ಸರ್ತಿ ಮಧ್ಯರಾತ್ರಿ ಹೊತ್ತಲ್ಲಿ ತಾರಿಣಿ ಅವರಿಂದ ಫೋನ್ ಬಂತು. ಕುವೆಂಪು ಹೋಗ್ಬಿಟ್ರು ಅಂತ ಸುದ್ದಿ. ನಾವು ಬೆಳಗಿನ ಜಾವ ಅಲ್ಲಿಗೆ ಹೋಗೋ ಹೊತ್ತಿಗೆ ಮಾಧ್ಯಮದವರು, ಪೋಲಿಸರು, ಸಾರ್ವಜನಿಕರು ಸೇರಿದ್ದರು. ಅಲ್ಲಿ ನಡೆದ ಕೆಲವು ಘಟನೆಗಳನ್ನ ಹೇಳ್ಬೇಕು... ಅಲ್ಲಿಗೆ ಬಂದಿದ್ದ ಪರಿಚಯದವರೊಬ್ಬರು ತೇಜಸ್ವಿ ಅವರಿಗೆ, 'ಏನ್ಸಾರ್, ಕುವೆಂಪು ಹೋಗ್ಬಿಟ್ರಲ್ಲ, ಇನ್ನು ಈ ಮನೇಲಿ ಯಾರಿರ್ತಾರೆ?' ಅಂತ ಕೇಳಿದ್ರು. ತೇಜಸ್ವಿ ನಮ್ಮ ಪಕ್ಕವೇ ಇದ್ರು, ಅವರು 'ನಾನೇ ಕುವೆಂಪು' ಅಂದ್ರು. ಯಾಕೆ ಹಾಗಂದ್ರು, ಏನು ಅಂತ ನನಗೆ ಆಗಲೂ ಆಗಲಿಲ್ಲ, ಮುಂದೇನೂ ಕೇಳೋಕೆ ಆಗ್ಲಿಲ್ಲ.

ನಾವೆಲ್ಲ ಮನೆಯೊಳಕ್ಕೆ ಹೋದ್ವಿ. ಸ್ವಲ್ಪ ಹೊತ್ತಿಗೆ ಕಾಂಪೌಂಡ್ ಹತ್ತಿರ ಏನೋ ಗಲಾಟೆ ರೀತಿ ಸದ್ದು ಕೇಳ್ತು. ಏನು ಅಂತ ನಾವೆಲ್ಲ ಹೊರಕ್ಕೆ ಹೋಗಿ ನೋಡಿದ್ರೆ ಅಲ್ಲಿ ಸುಮಾರು ಜನ ಜಲಗಾರರು ಇದ್ದರು. ಅವರು ಪ್ರತಿದಿನ ಕುವೆಂಪು ಅವರ ಮನೆ, ರಸ್ತೆಗಳನ್ನು ಗುಡಿಸೋದನ್ನ ನಾನು ನೋಡಿದ್ದೆ. ಅವರಲ್ಲಿ ಒಬ್ಬ, 'ಅಯ್ಯ ಅವ್ರು ನಮ್ಮ ಮೇಲೆ ಏನೋ ಬರೆದವ್ರಂತೆ. ನಾವು ಅಯ್ಯಾ ಅವ್ರನ್ನ ನೋಡ್ಬೇಕು' ಅಂತ ನಿಂತಿದ್ದರು. ಆದರೆ ಪೋಲಿಸರು ಒಳಕ್ಕೆ ಬಿಡೋಕೆ ತಯಾರಿರಲಿಲ್ಲ. ಆಗ ತೇಜಸ್ವಿಯವರು ಪೋಲಿಸರಿಗೆ ಹೇಳಿ ಅವರಿಗೆಲ್ಲ ಕುವೆಂಪು ಅವರ ದರ್ಶನ ಮಾಡೋಕೆ ಬಿಡಿಸಿದ್ರು.

ಕೆಲವರು ದೇಜಗೌ ಟ್ರಸ್ಟ್‌ನಲ್ಲಿ ಕುವೆಂಪು ಅವರ ಅಂತಿಮ ಸಂಸ್ಕಾರ ನಡೀಬೇಕು ಅಂತ ಹೇಳೋಕೆ ಶುರು ಮಾಡಿದ್ರು. ಇನ್ನೂ ಕೆಲವರು, ಕುವೆಂಪು ಅವರು 'ಮಾನಸ ಗಂಗೋತ್ರಿ'ಯನ್ನ ಕಟ್ಟಿ ಬೆಳೆಸಿದ್ದಾರೆ, ಹಾಗಾಗಿ ಅಲ್ಲಿಯೇ ಅವರ ಸಂಸ್ಕಾರ ನಡೀಬೇಕು ಅಂತ ಹೇಳುತ್ತಿದ್ರು. ಆಗ ತೇಜಸ್ವಿಯವರು 'ಎಲ್ಲೂ ಬೇಡ, ಅವರು ಹುಟ್ಟಿದ ಜಾಗದಲ್ಲಾಗಲಿ' ಅಂತ ಹೇಳಿ ಕುಪ್ಪಳ್ಳಿಯಲ್ಲಿ ಅದನ್ನು ನೆರವೇರಿಸಿದ್ರು. ಐಎಎಸ್ ಅಧಿಕಾರಿಗಳೂ, ಸಾಹಿತಿಗಳೂ ಆಗಿದ್ದ ಶಿವರಾಂ ಅವರು ದೇಹವನ್ನು ಸಾಗಿಸಲು ದೊಡ್ಡ ಬಸ್ ರೀತಿಯ ವಾಹನವೊಂದನ್ನು ವ್ಯವಸ್ಥೆ ಮಾಡಿ ಕೊಟ್ರು. ನಾವೆಲ್ಲ ಅದರಲ್ಲೇ ಹೋದ್ವಿ. ದಾರಿಯುದ್ದಕ್ಕೂ ಜನ ಜನ ಜನ... ಕುಪ್ಪಳ್ಳಿವರೆಗೂ ಪ್ರತಿ ಹಳ್ಳಿಹಳ್ಳಿಯಲ್ಲೂ ಜನ ಕಾದಿದ್ದು 'ಕುವೆಂಪು ಅವರಿಗೆ ಜೈ' ಅಂತ ಕೂಗ್ತಾ ಅಂತಿಮ ದರ್ಶನ ಮಾಡಿದರು. ಈ ಅನುಭವವನ್ನು ಎಂದೂ ಮರೆಯೋಕೆ ಸಾಧ್ಯವಿಲ್ಲ.

'ಕವಿಶೈಲ'ದಲ್ಲಿ ಚಿತೆಯಿಟ್ಟು ಎಲ್ಲ ಸಿದ್ಧತೆಗಳನ್ನೂ ಮಾಡಿದ್ದರು. ಕುವೆಂಪು ಅವರ ಕುಟುಂಬದವರೆಲ್ಲ ಪ್ರದಕ್ಷಿಣೆ ಹಾಕಿ ನಮನ ಸಲ್ಲಿಸಿದ್ರು. ತೇಜಸ್ವಿ, ನಾವೆಲ್ಲ ಒಂದು ಕಡೆ ನಿಂತು ಇದನ್ನ ನೋಡ್ತಾ ಇದ್ವಿ. ಆಮೇಲೆ ಯಾರೋ 'ಬೆಂಕಿ ಕೊಡಿ' ಅಂದ್ರು. ಆಗ ತೇಜಸ್ವಿ ಉರಿಯುತ್ತ ಇದ್ದ ಬೆಂಕಿ ಸೀಳನ್ನ ಎಡಗೈಯಲ್ಲಿ ಹಿಡಕೊಂಡು ಬೆಂಕಿ ಕೊಡೋಕೆ ಹೋದ್ರು. ಆಗ, ಶಾಸಕರಾಗಿದ್ದ ಡಿ.ಬಿ. ಚಂದ್ರೇಗೌಡರು 'ತೇಜಸ್ವಿ... ಇದೇನು ಎಡಗೈ?' ಅಂದ್ರು. ಅದಕ್ಕೆ ತೇಜಸ್ವಿ, 'ಇಷ್ಟು ದಿನ ಕುವೆಂಪು ಹೇಳಿದ್ದೆಲ್ಲ ವ್ಯರ್ಥ' ಅಂದ್ರು. ಚಂದ್ರೇಗೌಡ್ರು ಸುಮ್ಮನಾಗಿ ಬಿಟ್ಟರು. ತೇಜಸ್ವಿ ಎಡಗೈಯಲ್ಲೆ ಬೆಂಕಿ ಕೊಟ್ರು.

ಇನ್ನೊಂದು ಸಂಗತಿ ಹೇಳಬೇಕು: ನಾನು ಮೂಡಿಗೆರೆಗೆ ಒಬ್ಬಳೇ ಹೋದ ಸಂದರ್ಭಗಳಲ್ಲಿ ವಾಪಸ್ಸು ಬಸ್ಸಿಗೆ ಬರಬೇಕು ಅಂದಾಗ ತೇಜಸ್ವಿಯವರು ನನ್ನನ್ನ ಕಾರಿನಲ್ಲಿ ಕೂರಿಸಿಕೊಂಡು ಬಸ್‌ಸ್ಟ್ಯಾಂಡಿಗೆ ಕರಕೊಂಡು ಬಂದು, ಬಸ್ಸು ಬರೋವರೆಗೆ ಕಾದಿದ್ದು ಹತ್ತಿಸಿ ಹೋಗುತ್ತಿದ್ರು. ಆ ಕಾಳಜಿ ಈಗೆಲ್ಲ ಸಿಗೋಕೆ ಸಾಧ್ಯಾನ? ನೈತಿಕವಾಗಿ ಅವರು ಎಷ್ಟು ಗಟ್ಟಿಯಾಗಿದ್ರು ಅನ್ನೋದಕ್ಕೆ ಹೇಳ್ತೀನಿ: ಒಂದು ಸರ್ತಿ ರಾಮದಾಸ್, ನಿರ್ಮಲ, ನಾನು ಮೂಡಿಗೆರೆಗೆ ಹೋಗೋಣ ಅಂದುಕೊಂಡು, ರಾಮದಾಸ್ ತೇಜಸ್ವಿಗೆ ಫೋನ್ ಮಾಡಿದ್ರು. ತೇಜಸ್ವಿ ಅತ್ತ ಕಡೆಯಿಂದ, 'ಇಲ್ಲ ಇಲ್ಲ, ಈಗ ಬರಬೇಡಿ. ಮನೇಲಿ ರಾಜೇಶ್ (ರಾಜೇಶ್ವರಿ) ಇಲ್ಲ' ಅಂದರಂತೆ. ಪರ್ಸನಾಲಿಟಿನೇ ಮುಖ್ಯ ಆಗಿರೋ ಇವತ್ತಿನ ಕಾಲದವರಿಗೆ ಇದು ಅಪ್ರಸ್ತುತ, ಪ್ರಯೋಜನವಿಲ್ಲದ ವಿಷಯ ಅನ್ನಿಸಬಹುದು. ಆದರೆ ನಡತೆ ಅನ್ನೋದು ಪರ್ಸನಾಲಿಟಿಗಿಂತ ಎಷ್ಟು ಮುಖ್ಯ ಅನ್ನಲ್ವಾ ಇದನ್ನು ನೋಡಿದ್ರೆ? ನಮ್ಮ ಮನೆಯಲ್ಲಿ